# ಕನ್ನಡ ವಿಶ್ವವಿದ್ಯಾಲಯ, ಹಂಪಿ

**ವಿದ್ಯಾರಣ್ಯ-೫೮೩ ೨೭೬, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ**

☎೦೮೩೯೪-೨೪೧೩೩೨ ಫ್ಯಾಕ್ಸ್ : ೦೮೩೯೪-೨೪೧೩೩೫ ಇ-ಅಂಚೆ : kannadauniversity@gmail.com

---

ಸಂಖ್ಯೆ:ಕವಿಹಂ:ಕುಸ:371(ಜೆ):2017–18 ದಿನಾಂಕ: 07.10.2017

## <u>ನೇಮಕಾತಿ ಅಧಿಸೂಚನೆ</u>

**ವಿಷಯ :** ಕನ್ನಡ ವಿಶ್ವವಿದ್ಯಾಲಯದಲ್ಲಿ ಸ್ಥಳೀಯ ವೃಂದದಲ್ಲಿ (ಹೈದ್ರಾಬಾದ್ ಕರ್ನಾಟಕ ೩೭೧ಜೆಗೆ ಅನ್ವಯಿಸಿ) ಖಾಲಿಯಿರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಸ್ಥಳೀಯ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸುವ ಕುರಿತು.

**ಉಲ್ಲೇಖ :** ಉನ್ನತ ಶಿಕ್ಷಣ ಇಲಾಖೆ ಪತ್ರ ಸಂಖ್ಯೆ ಇಡಿ೫೭೨ ಯುಎನ್‌ಇ ೨೦೧೪ ದಿನಾಂಕ ೨೭-೦೯-೨೦೧೭

ಕನ್ನಡ ವಿಶ್ವವಿದ್ಯಾಲಯದಲ್ಲಿ ೩೭೧(ಜೆ) ದನ್ವಯ ಖಾಲಿ ಇರುವ ವಿವಿಧ ಬೋಧಕ ಹುದ್ದೆಗಳನ್ನು ಉಲ್ಲೇಖ (೧) ರಂತೆ ನೇರ ನೇಮಕಾತಿಯ ಮೂಲಕ ಭರ್ತಿ ಮಾಡಲು ಸರಕಾರ ಅನುಮತಿ ನೀಡಿದೆ. ಯುಜಿಸಿ ನಿಯಮಾವಳಿಗಳನ್ವಯ ನೇಮಕಾತಿ ಅಧಿಸೂಚನೆಯನ್ನು ಈ ಕೆಳಕಂಡ ಅರ್ಹ ಪ್ರವರ್ಗಗಳ ಅಭ್ಯರ್ಥಿಗಳಿಂದ ನಿಗದಿತ ಅರ್ಜಿ ನಮೂನೆಯಲ್ಲಿ (ಎಂಟು ಸೆಟ್)ಗಳಲ್ಲಿ ಆಹ್ವಾನಿಸಲಾಗಿದೆ. ಖಾಲಿಯಿರುವ ವಿಭಾಗವಾರು ಹುದ್ದೆಗಳ ಮತ್ತು ಮೀಸಲಾತಿ ವಿವರ ಈ ಕೆಳಗಿನಂತಿದೆ. ಹೆಚ್ಚಿನ ವಿವರಗಳಿಗೆ ಕನ್ನಡ ವಿಶ್ವವಿದ್ಯಾಲಯ ವೆಬ್‌ಸೈಟ್ www.kannadauniversity.org ನೋಡುವುದು.

* * *

**ರಿಕ್ತ 371(ಜೆ) ಸ್ಥಳೀಯ ವೃಂದದ ಹುದ್ದೆಗಳಾದ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕರ ನೇರ ನೇಮಕಾತಿ**

| ಕ್ರ.ಸಂ. | ವಿಭಾಗವಾರು | ರಿಕ್ತ ಹುದ್ದೆಗಳು | | |
|---|---|---|---|---|
| | | ಪ್ರಾಧ್ಯಾಪಕರು | ಸಹ ಪ್ರಾಧ್ಯಾಪಕರು | ಸಹಾಯಕ ಪ್ರಾಧ್ಯಾಪಕರು |
| **I** | **ಭಾಷಾ ನಿಕಾಯ** | | | |
| 1 | ಕನ್ನಡ ಸಾಹಿತ್ಯ ವಿಭಾಗ | – | 01–ಪ.ಪಂ. (ಮೆ.) | – |
| 2 | ಭಾಷಾಧ್ಯಯನ ವಿಭಾಗ | – | – | - |
| 3 | ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ | – | – | – |
| 4 | ಭಾಷಾಂತರ ವಿಭಾಗ | – | 01–ಸಾಮಾನ್ಯ (ಗ್ರಾಮೀಣ)(ಇಂಗ್ಲೀಷ್) | 01 –ಸಾಮಾನ್ಯ (ಹಿಂದಿ) |
| 5 | ಹಸ್ತಪ್ರತಿಶಾಸ್ತ್ರ ವಿಭಾಗ | – | – | – |
| 6 | ಮಹಿಳಾ ಅಧ್ಯಯನ ವಿಭಾಗ | – | – | 01–ಸಾಮಾನ್ಯ(ಗ್ರಾಮೀಣ) |
| 7 | ಅಂತರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ, ಕೂಡಲಸಂಗಮ | – | – | – |
| 8 | ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ | – | 01–ಸಾಮಾನ್ಯ(ಮಹಿಳೆ) | – |
| 9 | ದೇಸಿ ಸಂಸ್ಕೃತಿ ಅಧ್ಯಯನ ಕೇಂದ್ರ, ಕುರುಬನಕಟ್ಟಿ | – | – | – |
| 10 | ಅಧ್ಯಯನ ಕೇಂದ್ರ, ದೇವದುರ್ಗ | – | – | 01–2ಎ (ಮೆರಿಟ್) (ಕನ್ನಡ ಜಾನಪದ) |
| **II** | **ಸಮಾಜವಿಜ್ಞಾನಗಳ ನಿಕಾಯ** | | | |
| 1 | ಚರಿತ್ರೆ ಅಧ್ಯಯನ ವಿಭಾಗ | – | – | 01–2ಬಿ (ಮಹಿಳೆ) |
| 2 | ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ | – | – | – |
| 3 | ಶಾಸನಶಾಸ್ತ್ರ ವಿಭಾಗ | – | 01–ಸಾಮಾನ್ಯ (ಮೆ) | – |
| 4 | ಜಾನಪದ ಅಧ್ಯಯನ ವಿಭಾಗ | – | – | – |
| 5 | ಅಭಿವೃದ್ಧಿ ಅಧ್ಯಯನ ವಿಭಾಗ | – | – | 01–ಸಾಮಾನ್ಯ (ವಿಕಲಚೇತನ)(ವಾಣಿಜ್ಯ) |
| 6 | ಬುಡಕಟ್ಟು ಅಧ್ಯಯನ ವಿಭಾಗ | – | – | – |
| 7 | ಮಾನವಶಾಸ್ತ್ರ ಅಧ್ಯಯನ ವಿಭಾಗ | – | – | – |
| 8 | ರಾಜ್ಯಶಾಸ್ತ್ರ ವಿಭಾಗ | – | – | 01–ಪ.ಜಾ. (ಮೆರಿಟ್) |
| 9 | ಅರ್ಥಶಾಸ್ತ್ರ ವಿಭಾಗ | – | 01– ಪ್ರವರ್ಗ–1(ಮೆ) | 01–ಸಾಮಾನ್ಯ(ಮಹಿಳೆ) |
| 10 | ಪತ್ರಿಕೋದ್ಯಮ ವಿಭಾಗ | – | 01–ಪ.ಜಾ.(ಮೆ) | 01– ಪ್ರವರ್ಗ–1 (ಮೆ) |
| **III** | **ಲಲಿತ ಕಲೆಗಳ ನಿಕಾಯ** | | | |
| 1 | ಸಂಗೀತ ಮತ್ತು ನೃತ್ಯ ವಿಭಾಗ | – | – | 01–ಪ.ಜಾ.(ಮೆ.)(ಕನ್ನಡ) 01 –ಸಾಮಾನ್ಯ |
| 2 | ದೃಶ್ಯಕಲಾ ವಿಭಾಗ | – | – | 01–ಸಾಮಾನ್ಯ (ಮಹಿಳೆ) 01–ಸಾಮಾನ್ಯ(ಮೆ) |
| 3 | ವಾಸ್ತು,ಶಿಲ್ಪ ಮತ್ತು ಪ್ರತಿಮಾಶಾಸ್ತ್ರ ವಿಭಾಗ, ಬಾದಾಮಿ | – | – | **01 –ಪ.ಜಾ.(ಮಹಿಳೆ) (ಚಿತ್ರಕಲೆ ಬಾದಾಮಿ ಕೇಂದ್ರ)** |
| 4 | ನಾಟಕ ವಿಭಾಗ | – | – | 01–2ಎ (ಮಹಿಳೆ) |
| **IV** | **ವಿಜ್ಞಾನಗಳ ಇತಿಹಾಸ ನಿಕಾಯ** | | | |
| 1 | ವಿಜ್ಞಾನಗಳ ಇತಿಹಾಸ ವಿಭಾಗ | 01–ಸಾಮಾನ್ಯ(ಮೆ) (ಸಸ್ಯಶಾಸ್ತ್ರ) ಕುರುಬನಕಟ್ಟೆ ಕೇಂದ್ರ | – | – |
| 2 | ಮನುಕುಲ ಜೀವನ ವಿಜ್ಞಾನಗಳ ವಿಭಾಗ | – | – | – |
| 3 | ಖಗೋಳಶಾಸ್ತ್ರ ಮತ್ತು ತತ್ಸಸಂಬಂಧಿ ವಿಜ್ಞಾನಗಳ ವಿಭಾಗ | – | – | – |
| 4 | ಆಯುರ್ವೇದ ಮತ್ತು ಜನಪದ ವೈದ್ಯ ವಿಭಾಗ | – | – | – |
| | **ಒಟ್ಟು** | **01** | **06** | **14** |

**ಬೋಧಕ ಹುದ್ದೆಗಳ ವಿದ್ಯಾರ್ಹತೆ ಮತ್ತು ವೇತನ ಶ್ರೇಣಿಗಳ ವಿವರ :**

| ಕ್ರ.ಸಂ. | ಹುದ್ದೆ | ಹುದ್ದೆಯ ವೇತನ ಶ್ರೇಣಿ | ಅರ್ಹತೆ |
|---|---|---|---|
| 1 | ಸಹಾಯಕ ಪ್ರಾಧ್ಯಾಪಕರು | ರೂ. 15600 – 39100 + AGP 6000 | ಯುಜಿಸಿ ನಿಗಧಿಪಡಿಸಿದ ಅರ್ಹತೆಗಳು ಅನ್ವಯಿಸುತ್ತವೆ. |
| 2 | ಸಹ ಪ್ರಾಧ್ಯಾಪಕರು | ರೂ. 37400 – 67000 + AGP 9000 | ಯುಜಿಸಿ ನಿಗಧಿಪಡಿಸಿದ ಅರ್ಹತೆಗಳು ಅನ್ವಯಿಸುತ್ತವೆ. |
| 3 | ಪ್ರಾಧ್ಯಾಪಕರು | ರೂ. 37400 – 67000 + AGP 10000 | ಯುಜಿಸಿ ನಿಗಧಿಪಡಿಸಿದ ಅರ್ಹತೆಗಳು ಅನ್ವಯಿಸುತ್ತವೆ. |

*** ಯುಜಿಸಿ ವೇತನ ಶ್ರೇಣಿಯ ಶಾಸನಶಾಸ್ತ್ರ ವಿಭಾಗದ ಹುದ್ದೆಗೆ ಅರ್ಹತೆ :**
ಕನ್ನಡ, ಚರಿತ್ರೆ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ – ಈ ಯಾವುದಾದರೊಂದು ಸ್ನಾತಕೋತ್ತರ ಪದವಿಯೊಂದಿಗೆ ಶಾಸನಶಾಸ್ತ್ರವನ್ನು ಐಚ್ಛಿಕ ವಿಷಯವನ್ನಾಗಿ ಹೊಂದಿದ ಅಥವಾ ಶಾಸನಶಾಸ್ತ್ರ ಡಿಪ್ಲೊಮಾ ಪಡೆದವರಿಗೆ ಆದ್ಯತೆ ನೀಡಲಾಗುವುದು.

**ವಿಶೇಷ ಸೂಚನೆ :**

1. ಯುಜಿಸಿಯು ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ವಯ ವಿದ್ಯಾರ್ಹತೆ, ವೇತನ ಮತ್ತಿತರೆ ಅರ್ಹತೆಗಳನ್ನು ಸದರಿ ಹುದ್ದೆಗಳಿಗೆ ಅನ್ವಯಿಸುವುದು.
2. ಡಿ.ಡಿ.ಯನ್ನು ಹಣಕಾಸು ಅಧಿಕಾರಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರ ಹೆಸರಿಗೆ ಸಂದಾಯವಾಗುವಂತೆ ರಾಷ್ಟ್ರೀಯಕೃತ ಬ್ಯಾಂಕಿನಿಂದ ಪಡೆಯುವುದು.
3. ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸ ಬಯಸುವವರು ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿಗಳನ್ನು ನಿರ್ವಹಣಾ ಶುಲ್ಕದೊಂದಿಗೆ ಸಲ್ಲಿಸುವುದು.
4. ಆಯ್ಕೆಗೊಂಡ ಅಭ್ಯರ್ಥಿಗಳು ಕನ್ನಡ ವಿಶ್ವವಿದ್ಯಾಲಯದ ಯಾವುದೇ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುವುದು.
5. ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗುವುದು.
6. ನಿಗದಿತ ಅವಧಿ ಮೀರಿ ಬಂದ ಹಾಗೂ ಅಪೂರ್ಣ ಮಾಹಿತಿಯುಳ್ಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
7. ಹುದ್ದೆಗಳ ನೇಮಕಾತಿಗೆ ಯಾವುದೇ ರೀತಿಯ ಪ್ರಭಾವ ಅಥವಾ ಒತ್ತಡಗಳನ್ನು ಅಭ್ಯರ್ಥಿಗಳು ತರುವಂತಿಲ್ಲ. ಅಂತಹ ಒತ್ತಡಗಳನ್ನು ಅಪರಾಧ ಎಂದು ಪರಿಗಣಿಸಲಾಗುವುದು.
8. ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಸಂದರ್ಶನ, ಆಯ್ಕೆ ಮುಂತಾದ ಪ್ರಕ್ರಿಯೆಗಳಿಗೆ ಕನ್ನಡ ವಿಶ್ವವಿದ್ಯಾಲಯದ ವೆಬ್‌ಸೈಟ್ www.kannadauniversity.org ನೋಡುವುದು.
9. ಈ ಹುದ್ದೆಗಳ ನೇಮಕಾತಿಯು ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪತ್ರ ಸಂಖ್ಯೆ ಇಡಿ 572 ಯುಎನ್‌ಇ 2014 ದಿನಾಂಕ 27.09.2017ರ ಷರತ್ತಿಗೊಳಪಟ್ಟಂತೆ ಸದರಿ ನೇಮಕಾತಿಗಳು ಸರ್ಕಾರದ ಅನುಮೋದನೆಯ ನಂತರ ಸಿಂಧುಗೊಳ್ಳುತ್ತವೆ.
10. ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ 10–11–2017 ರ ಸಂಜೆ 5–30 ರ ಒಳಗಾಗಿ ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ–583276 ರವರಿಗೆ ಖುದ್ದಾಗಿ ಅಥವಾ ಪೋಸ್ಟ್ ಮೂಲಕ ಸಲ್ಲಿಸುವುದು.
11. ವಿಶ್ವವಿದ್ಯಾಲಯವು ಹುದ್ದೆಗಳ ಸಂಖ್ಯೆಯನ್ನು ಕಡಿಮೆ ಮಾಡುವ ಅಥವಾ ಬದಲಿಸುವ ಪುನರ್ ವಿಂಗಡಿಸುವ ಅಥವಾ ರದ್ದುಗೊಳಿಸುವ ಅಧಿಕಾರವನ್ನು ಹೊಂದಿರುತ್ತದೆ.
12. ವಿಶ್ವವಿದ್ಯಾಲಯವು ಜಾಹೀರಾತಿನಲ್ಲಿ ಸೂಚಿಸಿದ ಸದರಿ ಹುದ್ದೆಗಳನ್ನು ಭರ್ತಿ ಮಾಡುವ ಅಥವಾ ರದ್ದುಗೊಳಿಸುವ ಅಧಿಕಾರವನ್ನು ಹೊಂದಿರುತ್ತದೆ.
13. ವಿಶ್ವವಿದ್ಯಾಲಯವು ಯಾವುದೇ ಅಂಚೆ ವಿಳಂಬಕ್ಕೆ ಹೊಣೆಯಾಗುವುದಿಲ್ಲ.
14. ಮೀಸಲಾತಿ ಬಯಸುವ ಅಭ್ಯರ್ಥಿಗಳು ತತ್ಸಂಬಂಧದ ಪ್ರಮಾಣಪತ್ರಗಳನ್ನು ದೃಢೀಕರಣದೊಂದಿಗೆ ಅಗತ್ಯವಾಗಿ ಲಗತ್ತಿಸುವುದು.
15. ಜಾಹೀರಾತಿನಲ್ಲಿ ತೋರಿಸಿರುವಂತೆ ಆಯ್ಕೆ, ನೇಮಕಾತಿ, ಸಂದರ್ಶನ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ತೀರ್ಮಾನವೇ ಅಂತಿಮವಾಗಿರುತ್ತದೆ.
16. ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

17. ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ಪರೀಕ್ಷೆ, ಸಂದರ್ಶನ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ವಿಶ್ವವಿದ್ಯಾಲಯದ ವೆಬ್‌ಸೈಟ್‌ನ್ನು ನೋಡುವುದು. ಇದಕ್ಕೆ ಸಂಬಂಧಿಸಿದಂತೆ ಯಾವುದೇ ಪತ್ರ ವ್ಯವಹಾರಗಳು ಇರುವುದಿಲ್ಲ.

ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ